# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 682 (803) |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು |

******

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು, ಹಾಸನ, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ ಎಷ್ಟು; ಇದರಲ್ಲಿ ಖಾಯಂ ಮತ್ತು ನೇರ ಪಾವತಿ ಪೌರಕಾರ್ಮಿಕರ ಸಂಖ್ಯೆ ಎಷ್ಟು; ಜಿಲ್ಲಾವಾರು ಮಾಹಿತಿ ನೀಡುವುದು | ಮೈಸೂರು, ಹಾಸನ, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಮತ್ತು ನೇರ ಪಾವತಿ ಪೌರಕಾರ್ಮಿಕರ ವಿವರ ಕೆಳಗಿನಂತಿದೆ. |

| ಕ್ರ.ಸಂ | ಜಿಲ್ಲೆಯ ಹೆಸರು | ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ | |
|---|---|---|---|
| | | ಖಾಯಂ | ನೇರಪಾವತಿ |
| 1 | ಮೈಸೂರು | 428 | 48 |
| 2 | ಹಾಸನ | 350 | 16 |
| 3 | ಮಂಡ್ಯ | 273 | 97 |
| 4 | ಚಾಮರಾಜನಗರ | 151 | 64 |
| | **ಒಟ್ಟು** | **1202** | **225** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಸದರಿ ಜಿಲ್ಲೆಗಳಲ್ಲಿ ಎಷ್ಟು ಸಂಖ್ಯೆಯ ಪೌರಕಾರ್ಮಿಕರನ್ನು ಯಾವ ಯಾವ ವರ್ಷ ಖಾಯಂ ಮಾಡಲಾಗಿದೆ ಹಾಗೂ ನೇಮಕಾತಿಗೆ ಒಳಪಡಿಸಲಾಗಿದೆ; (ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ ನಅಇ 126 ಟಿಎಂಎಸ್ 2016 ದಿನಾಂಕ: 04.12.2017ರ ಹಾಗೂ ಸರ್ಕಾರದ ಆದೇಶ ಸಂಖ್ಯೆ ನಅಇ 176 ಜಿಇಎಲ್ 2022(ಭಾ-2)(ಇ) ದಿನಾಂಕ: 23.11.2022ರಲ್ಲಿ ಕರ್ನಾಟಕ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಲ್ಲಿ ನೇರಪಾವತಿ/ ದಿನಗೂಲಿ, ಕ್ಷೇಮಾಭಿವೃದ್ಧಿ ಗುತ್ತಿಗೆ/ಹೊರಗುತ್ತಿಗೆ/ ಇತರೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ವಿಶೇಷ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿದ್ದು, ಸದರಿ ಜಿಲ್ಲೆಗಳಲ್ಲಿ ಪೌರಕಾರ್ಮಿಕರನ್ನು ಖಾಯಂ ಮಾಡಿದ ವಿವರ ಈ ಕೆಳಗಿನಂತಿದೆ: |

| ಕ್ರ.ಸಂ | ಜಿಲ್ಲೆಯ ಹೆಸರು | 2017 | 2022 |
|---|---|---|---|
| 1 | ಮೈಸೂರು | 33 | 282 |
| 2 | ಹಾಸನ | 109 | 79 |
| 3 | ಮಂಡ್ಯ | 71 | 116 |
| 4 | ಚಾಮರಾಜನಗರ | 32 | 41 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ಮೇಲ್ಕಾಣಿಸಿದ ಜಿಲ್ಲೆಗಳಲ್ಲಿ ವಿಶೇಷ ನೇಮಕಾತಿಯಡಿ ಭರ್ತಿ ಮಾಡುವ ಸಂಬಂಧ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆಯೇ; (ಸಂಪೂರ್ಣ ಮಾಹಿತಿ ಒದಗಿಸುವುದು): | ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ನೇರಪಾವತಿ/ದಿನಗೂಲಿ, ಕ್ಷೇಮಾಭಿವೃದ್ಧಿ ಗುತ್ತಿಗೆ/ ಇತರೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 57 TMS 2024 (ಇ), ದಿನಾಂಕ: 27.09.2024 ರಲ್ಲಿ 1100 ಹುದ್ದೆಗಳನ್ನು ಹಂಚಿಕೆ ಮಾಡಿ ಆದೇಶಿಸಿದ ಹಿನ್ನೆಲೆಯಲ್ಲಿ ಪೌರಾಡಳಿತ ನಿರ್ದೇಶನಾಲಯದ ಆದೇಶ ದಿನಾಂಕ:23.10.2024ರಲ್ಲಿ ಮೈಸೂರು-46, ಹಾಸನ-23, ಮಂಡ್ಯ-29 ಹಾಗೂ ಚಾಮರಾಜನಗರ-17 ಪೌರಕಾರ್ಮಿಕ ಹುದ್ದೆಗಳನ್ನು ಸ್ಥಳೀಯ ಸಂಸ್ಥೆವಾರು ಹಂಚಿಕೆ ಮಾಡಲಾಗಿರುತ್ತದೆ. |

<table>
<tr>
<td></td>
<td></td>
<td>ಸರ್ಕಾರದ ಆದೇಶ ಸಂಖ್ಯೆ: ನಅಇ 176ಜಿಇಎಲ್ 2022 (ಭಾ-2)(ಇ), ದಿನಾಂಕ:29.03.2023 ರಲ್ಲಿ 132 ಸಂಖ್ಯಾತಿರಿಕ್ತ ಪೌರಕಾರ್ಮಿಕ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. ಅದರಂತೆ ನಿರ್ದೇಶನಾಲಯದ ಆದೇಶ ದಿನಾಂಕ:31.01.2026ರಲ್ಲಿ ಹೂಟಗಳ್ಳಿ ನಗರಸಭೆ-3, ಮಂಡ್ಯ ನಗರಸಭೆ-9 ಹಾಗೂ ಚಾಮರಾಜನಗರ ನಗರಸಭೆ-4 ಮತ್ತು ಕೊಳ್ಳೇಗಾಲ-3 ಪೌರಕಾರ್ಮಿಕ ಹುದ್ದೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ,<br><br>ಮೇಲ್ಕಂಡ ಆದೇಶಗಳ ರೀತ್ಯಾ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಹಂತದಲ್ಲಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.</td>
</tr>
<tr>
<td>ಈ)</td>
<td>ಈ ಜಿಲ್ಲೆಗಳಲ್ಲಿರುವ ತ್ಯಾಜ್ಯ ವಿಲೇವಾರಿ ವಾಹನ ಚಾಲಕರು, ಸಹಾಯಕರು ಹಾಗೂ ಆಪರೇಟರ್ಸ್‌ಗಳ ಸಂಖ್ಯೆ ಎಷ್ಟು; ಇವರನ್ನು ಖಾಯಂ ಮಾಡುವ ಕುರಿತು ಸರ್ಕಾರದ ನಿಲುವೇನು? (ಜಿಲ್ಲಾವಾರು ಮಾಹಿತಿ ನೀಡುವುದು)</td>
<td>ಮೈಸೂರು, ಹಾಸನ, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತ್ಯಾಜ್ಯ ವಿಲೇವಾರಿ ವಾಹನ ಚಾಲಕರು, ಸಹಾಯಕರು ಹಾಗೂ ಆಪರೇಟರ್ಸ್‌ಗಳ ಜಿಲ್ಲಾವಾರು ಮಾಹಿತಿ:
<table>
<tr><th>ಕ್ರ. ಸಂ.</th><th>ಜಿಲ್ಲೆಯ ಹೆಸರು</th><th>ತ್ಯಾಜ್ಯ ವಿಲೇವಾರಿ ವಾಹನ ಚಾಲಕರು</th><th>ಸಹಾಯಕರು</th><th>ಆಪರೇಟರ್ಸ್</th><th>ಒಟ್ಟು</th></tr>
<tr><td>1.</td><td>ಮೈಸೂರು</td><td>205</td><td>26</td><td>14</td><td>245</td></tr>
<tr><td>2.</td><td>ಹಾಸನ</td><td>64</td><td>50</td><td>9</td><td>123</td></tr>
<tr><td>3.</td><td>ಮಂಡ್ಯ</td><td>112</td><td>56</td><td>19</td><td>187</td></tr>
<tr><td>4.</td><td>ಚಾಮರಾಜ ನಗರ</td><td>56</td><td>4</td><td>1</td><td>61</td></tr>
<tr><td></td><td>ಒಟ್ಟು</td><td>437</td><td>136</td><td>43</td><td>616</td></tr>
</table>
ಪೌರಾಡಳಿತ ನಿರ್ದೇಶನಾಲಯದಿಂದ ಮೇಲ್ಕಂಡ ನೌಕರರನ್ನು ನೇರಪಾವತಿಯಡಿ ಪರಿಗಣಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಕಡತ ಸಂಖ್ಯೆ: ನಅಇ 104 ಟಿಎಂಎಸ್ 2025(ಇ) ರಲ್ಲಿ ನಿರ್ವಹಿಸಿ, ಆರ್ಥಿಕ ಇಲಾಖೆಯ ಅಭಿಪ್ರಾಯ / ಸಹಮತಿಗಾಗಿ ಸಲ್ಲಿಸಲಾಗಿದೆ.</td>
</tr>
</table>

ನಅಇ 22 ಎಲ್ ಸಿಕ್ಯೂ 2026(ಇ)

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು